ಪ್ರತಿಬಿಂಬ
PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-5, March - April 2026, Pp. 9-15
©*IIMRD*, Mysuru
IIMRD JOURNALS
www.iimrd.com

# ಹೆಗ್ಗಡದೇವನಕೋಟೆ ಪ್ರದೇಶದ ಶಾಸನೋಕ್ತ ವೈಷ್ಣವ ದೇವಾಲಯಗಳು

**ಡಾ. ಶಿವಕುಮಾರ ಎಂ.ಸಿ**
ಉಪನ್ಯಾಸಕರು, ಇತಿಹಾಸ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ

**ಸಾರಾಂಶ: (Abstract)**

*ಹೆಗ್ಗಡದೇವನಕೋಟೆ ಪ್ರದೇಶದಲ್ಲಿ ವಿವಿಧ ಧಾರ್ಮಿಕ ಪಂಥಗಳು ಬೆಳವಣಿಗೆ ಹೊಂದಿ ವಿಕಾಸವಾಗಿರುವುದನ್ನು ಕಾಣಬಹುದು ಈ ಪ್ರದೇಶವನ್ನು ಅನೇಕ ರಾಜವಂಶಗಳು ಪ್ರಾಚೀನ ಪುನ್ನಾಟದ ಅರಸರು, ಕದಂಬರು, ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು, ಉಮ್ಮತ್ತೂರಿನ ಪ್ರಭುಗಳು ಮತ್ತು ಸ್ಥಳಿಯ ಪ್ರಭುಗಳು ಆಳ್ವಿಕೆ ಮಾಡಿರುವುದನ್ನು ಹೆಗ್ಗಡದೇವನಕೋಟೆ ಪ್ರದೇಶದಲ್ಲಿ ದೊರೆತಿರುವ ಶಾಸನಗಳು ಉಲ್ಲೇಖಿಸುತ್ತವೆ. ಈ ಮನೆತನಗಳು ತಮ್ಮದೇ ಆದ ಪುರಾತತ್ವ ಮತ್ತು ಸಾಹಿತ್ಯಕ್ಕೆ ಕೊಡುಗೆಗಳನ್ನು ನೀಡಿದ್ದಾರೆ. ಅಂತವುಗಳಲ್ಲಿ ದೇವಾಲಯಗಳು ಪ್ರಮುಖವಾದವುಗಳಾಗಿವೆ. ಈ ಹಿನ್ನೆಲೆಯಲ್ಲಿ ಹೆಗ್ಗಡದೇವನಕೋಟೆ ಪ್ರದೇಶದ ಶಾಸನೋಕ್ತ ವೈಷ್ಣವ ದೇವಾಲಯಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.*

**ಮುಖ್ಯಪದಗಳು (Keywords):** *ಹೆಗ್ಗಡದೇವನಕೋಟೆ, ವರದರಾಜಸ್ವಾಮಿ, ಲಕ್ಷ್ಮೀಕಾಂತ ದೇವಾಲಯ, ಚೋಳರು.*

## ಪೀಠಿಕೆ

ದೇವಾಲಯಗಳು ಸಾಂಸ್ಕೃತಿಕ ಕೇಂದ್ರಗಳಾಗಿದ್ದು, ಇಲ್ಲಿ ಎರಡು ಶಬ್ದಗಳಿವೆ. ದೇವ ಮತ್ತು ಆಲಯ ಅಂದರೆ ದೇವರಮನೆ, ದೇವರ ಆಲಯ, ದೇವರ ಕಟ್ಟಡ ಅಂದರೆ ದೇವರು ಇರತಕ್ಕಂತಹ ಸ್ಥಾನ ಎಂದರ್ಥ. ದೇವಾಲಯಗಳು ಮಾನವನ ಬದುಕಿನಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದ್ದಲ್ಲದೆ. ಇವು ಸಾಮೂಹಿಕ ಪೂಜೆ, ಪ್ರಾರ್ಥನೆಗಳನ್ನು ಸಲ್ಲಿಸಲು ಅನುಕೂಲಕರವಾಗಿರುವ ಒಂದು ತಾಣವಾಗಿದೆ. ಒಟ್ಟಾರೆ ಇವು ಸಮಾಜದ ಧಾರ್ಮಿಕ ಶ್ರದ್ಧೆ ಹಾಗೂ ಭಕ್ತಿಯ ಪ್ರತೀಕ. ಹಾಗೆಯೇ ನಮ್ಮ ಭವ್ಯ ಸಾಂಸ್ಕೃತಿಕ ನೆಲೆಗಳಾಗಿವೆ. ಒಟ್ಟಾರೆ ಮಾನವನು ತನ್ನ ಪ್ರಾಪಂಚಿಕ ಸುಖವನ್ನು ಪಡೆಯಲು, ಜಗತ್ತಿನ ಸೃಷ್ಟಿಕರ್ತ ಹಾಗೂ ನಿಯಂತ್ರಕನಾದ ದೇವರ ಬಳಿ ಹೋಗಲು ಸರಿಯಾದ ಮಾರ್ಗವನ್ನು ತೋರಿಸುವಂತೆ ಆತನನ್ನು ಧ್ಯಾನಿಸಲು, ಮನಸ್ಸಿಗೆ ಶಾಂತತೆ ಪಡೆಯಲು ದೇವಾಲಯಗಳು ಅವಶ್ಯಕ.

*Please cite this article as:* ಶಿವಕುಮಾರ ಎಂ.ಸಿ. (2026). ಹೆಗ್ಗಡದೇವನಕೋಟೆ ಪ್ರದೇಶದ ಶಾಸನೋಕ್ತ ವೈಷ್ಣವ ದೇವಾಲಯಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(5). ಪು.ಸಂ.* 9–15

**ವರದರಾಜಸ್ವಾಮಿ ದೇವಾಲಯ – ಹೆಗ್ಗಡದೇವನಕೋಟೆ**

ಹೆಗ್ಗಡದೇವನಕೋಟೆಯು ಪ್ರಸ್ತುತ ಪಟ್ಟಣ ಪ್ರದೇಶವಾಗಿದ್ದು ಮೈಸೂರು ಜಿಲ್ಲೆಗೆ ಸೇರಿರುವ ಒಂದು ತಾಲೂಕು ಕೇಂದ್ರವಾಗಿದೆ. ಹೊಯ್ಸಳ ದೊರೆಗಳ ಅಧಿಕಾರಿಯಾದ ಹೆಗ್ಗಡದೇವನೆಂಬುವನು ಈ ಸ್ಥಳದಲ್ಲಿ ಒಂದು ಕೋಟೆಯನ್ನು ಕಟ್ಟಿ ಆಳ್ವಿಕೆ ಮಾಡುತ್ತಿದ್ದರಿಂದ ಈ ಪ್ರದೇಶಕ್ಕೆ ಹೆಗ್ಗಡದೇವನಕೋಟೆ ಎಂಬ ಹೆಸರು ಬಂದಿದೆ. ಈ ಪಟ್ಟಣದ ಪಶ್ಚಿಮ ಭಾಗದಲ್ಲಿ ನಿರ್ಮಿಸಲಾಗಿರುವ ವರದರಾಜಸ್ವಾಮಿ ದೇವಾಲಯವು ಪ್ರಸಿದ್ಧಿಯಾದ ಏಕಕೂಟ ದೇವಾಲಯವಾಗಿದೆ. ಕಣಶಿಲೆಯಲ್ಲಿ ಕಲ್ಲನ್ನು ಉಪಯೋಗಿಸಿ ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ಇದರಲ್ಲಿ ಒಂದು ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪಗಳು ಕಂಡುಬರುತ್ತವೆ. ದೇವಾಲಯವು ಹೊಯ್ಸಳರ ಕಾಲದಲ್ಲಿ ನಿರ್ಮಿಸಿರುವಂತಹ ದೇವಾಲಯವಾಗಿದ್ದು, ತದ ನಂತರ ಈ ದೇವಾಲಯ ಪ್ರಕೃತಿಯ ವಿಕೋಪಕ್ಕೆ ನವರಂಗ ಮುಖಮಂಟಪದ ಭಾಗಗಗಳು ನಶಿಸಿ ಹೋಗಿದ್ದರಿಂದ ವಿಜಯನಗರದ ಅರಸರು ಈ ದೇವಾಲಯದ ಸುಖನಾಸಿ ಮುಂದಿನ ಭಾಗವನ್ನು ಕಟ್ಟಿಸಿ ಜೀರ್ಣೋದ್ಧಾರ ಮಾಡಿಸಿದ್ದಾರೆ.

**ಲಕ್ಷ್ಮೀಕಾಂತ ದೇವಾಲಯ – ಕ್ಯಾತನಹಳ್ಳಿ**

ಕ್ಯಾತನಹಳ್ಳಿಯು ಹೆಗ್ಗದೇವನಕೋಟೆಯಿಂದ ಪೂರ್ವಕ್ಕೆ ಸುಮಾರು 34 ಕಿ.ಮೀ ದೂರದಲ್ಲಿದೆ. ಲಕ್ಷ್ಮೀಕಾಂತ ದೇವಾಲಯವನ್ನು ಕ್ಯಾತನಹಳ್ಳಿಯ ಪಶ್ಚಿಮ ಭಾಗದಲ್ಲಿ ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ಕ್ರಿ.ಶ.1322ರ ಶಾಸನವು ಹೊಯ್ಸಳ ದೊರೆ ಮೂರನೇ ಬಲ್ಲಾಳನ ಕಾಲದಲ್ಲಿ ತಗಡೂರಿನ ಕೊರವರ ಕೇತಗೌಡನು ಕ್ರಿ.ಶ.1184ರಲ್ಲಿ ಕೇತನಹಳ್ಳಿಯನ್ನು ನಿರ್ಮಿಸಿ ಮಲ್ಲಿನಾಥ ದೇವಾಲಯವನ್ನು ಹಾಗೂ ಒಂದು ಕೆರೆಯನ್ನು ನಿರ್ಮಿಸಿದನೆಂದು ತಿಳಿಸುತ್ತದೆ. ತರುವಾಯ ಆತನ ಮಗನಾದ ಹೊಯ್ಸಳಗೌಡನು ಲಕ್ಷ್ಮೀನಾರಾಯಣ ಹಾಗೂ ಒಂದು ಮಂಟಪವನ್ನು ಮಾಡಿಸಿ ಅದನ್ನು 156ವರ್ಷಗಳ ನಂತರ ಅಂದರೆ ಕ್ರಿ.ಶ.1322ರಲ್ಲಿ ಸಮಸ್ತ ಪ್ರಭುಗಳು ಪುನಃ ಒಟ್ಟುಗೂಡಿ ಪುನರ್ ಪ್ರತಿಷ್ಠಾಪನೆ ಮಾಡಿಸಿ ಈ ದೇವಾಲಯಕ್ಕೆ ದತ್ತಿ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಈ ದೇವಾಲಯದಲ್ಲಿ ಎರಡು ಗರ್ಭಗೃಹಗಳು, ಎರಡು ಸುಖನಾಸಿ, ಎರಡು ನವರಂಗ ಮತ್ತು ಮುಖಮಂಟಪ ಕಂಡುಬರುತ್ತವೆ.

**ಲಕ್ಷ್ಮೀಕಾಂತ ದೇವಾಲಯ–ಮುಳ್ಳೂರು**

ಮುಳ್ಳೂರು ಗ್ರಾಮವು ತಾಲೂಕು ಕೇಂದ್ರದ 25 ಕಿ.ಮೀ ದೂರದಲ್ಲಿದೆ. ಈ ಗ್ರಾಮದ ಪಶ್ಚಿಮ ಭಾಗದಲ್ಲಿ ದಕ್ಷಿಣಾಭಿಮುಖವಾಗಿದ್ದು ಹೊಯ್ಸಳ ಮನೆತನದ ಆಳ್ವಿಕೆಯ ಅವಧಿಯಲ್ಲಿ ಈ ದೇವಾಲಯವನ್ನು ನಿರ್ಮಿಸಲಾಗಿದೆ. ಈ ದೇವಾಲಯದ ಮುಂದೆ ದೀಪಸ್ತಂಭವನ್ನು ಮಾತ್ರ ಮೈಸೂರಿನ ಅರಸರಾದ ಚಾಮರಾಜ ಒಡೆಯರವರು ಕ್ರಿ.ಶ.1625ರಲ್ಲಿ ನಿಲ್ಲಿಸಿದ್ದುದರ ಬಗ್ಗೆ ಅಲ್ಲಿರುವ ಶಾಸನದಿಂದ ನಮಗೆ ತಿಳಿದು ಬರುತ್ತದೆ. ಈ ದೇವಾಲಯದ ನಿರ್ಮಾಣದ ಅರಸನ ಉದ್ದೇಶದ ಬಗ್ಗೆ ಯಾವುದೇ ರೀತಿಯ ಮಾಹಿತಿ ಲಭ್ಯವಿಲ್ಲ ಆದರೆ ಈ ದೇವಾಲಯದ ವಾಸ್ತು ಲಕ್ಷಣಗಳಿಂದ ಇದು ಹೊಯ್ಸಳರ ಕಾಲದ ನಿರ್ಮಾಣ ಎಂದು ಹೇಳಬಹುದು. ಇದು ಏಕ ಕೂಟ ದೇವಾಲಯವಾಗಿದ್ದು. ಈ ದೇವಾಲಯವು ಮೈಸೂರು ಅರಸರ ಕ್ರಿ.ಶ.1624–25 ರ ಅವಧಿಯಲ್ಲಿ ದುರಸ್ಥಿಗೊಂಡಿದ್ದು ಪ್ರಸ್ತುತವಾಗಿ ಸುಸ್ಥಿತಿಯಲ್ಲಿದೆ.

**ಲಕ್ಷೀನರಸಿಂಹ ದೇವಾಲಯ–ಸರಗೂರು**

ಸರಗೂರು ಪಟ್ಟಣವು ತಾಲೂಕು ಕೇಂದ್ರದಿಂದ ದಕ್ಷಿಣಕ್ಕೆ 11 ಕಿ.ಮೀ. ದೂರದಲ್ಲಿದೆ. ಪ್ರಸ್ತುತವಾಗಿ ತಾಲೂಕು ಕೇಂದ್ರವಾಗಿದೆ. ಮೊದಲು ಈ ಪಟ್ಟಣವು ಹೆಗ್ಗಡದೇವನಕೋಟೆ ತಾಲೂಕು ವ್ಯಾಪ್ತಿಗೆ ಸೇರಿತ್ತು. ಇದೊಂದು ಪ್ರಾಚೀನ ಸ್ಥಳವಾಗಿದ್ದು ಇಲ್ಲಿ ವಾರದ ಸಂತೆ ನಡೆಯುವುದರಿಂದ ಸಂತೆ ಸರಗೂರು ಎಂದು ಕರೆಯಲ್ಪಡುತ್ತದೆ. ಈ ಗ್ರಾಮದ ಪಕ್ಕದ ನರಸೀಪುರ ಗ್ರಾಮದಲ್ಲಿ ದೊರೆತಿರುವ ಕ್ರಿ.ಶ.1137ರ ಶಾಸನದಲ್ಲಿ 'ಸರಬಿಗೂರು' ಎಂದು ಉಲ್ಲೇಖಗೊಂಡಿದ್ದು ಕಾಲಕ್ರಮೇಣ ಇದು ಸರಗೂರು ರೂಪವೇ ಶಾಸನಗಳಲ್ಲಿ ಹೆಚ್ಚಾಗಿ ಪ್ರಚಲಿತದಲ್ಲಿದೆ. ಸರಗೂರು ಹಿಂದೆ ಸೀಮೆ ಅಥವಾ ಸ್ಥಳವೊಂದರ ಆಡಳಿತ ಕೇಂದ್ರವಾಗಿದ್ದು ಇಲ್ಲಿಂದ ಈವರೆಗೆ ವರದಿಯಾಗಿರುವ ಎಂಟು ಶಾಸನಗಳಲ್ಲಿ ಎರಡು ತಾಮ್ರ ಶಾಸನಗಳಾದರೆ ಉಳಿದ ಆರು ಶಿಲಾಶಾಸನಗಳಾಗಿವೆ. ಅವುಗಳಲ್ಲಿ ಶ್ರೀಪುರುಷನ ಆಳ್ವಿಕೆಗೆ ಸೇರಿದ ತಾಮ್ರಶಾಸನ, ಕೆಸುಗೊಳದ ಒಡೆಯನಾದ ಬಿಣಮ್ಮನಿಗೆ, ಧನ್ನಗವಾಡಿ ಗ್ರಾಮವನ್ನು ಬ್ರಹ್ಮಧೇಯವಾಗಿ ದತ್ತಿ ಬಿಟ್ಟ ಅಂಶವನ್ನು ದಾಖಲಿಸುತ್ತದೆ. ಊರ ಪಂಚಬಸದಿ ಬಳಿಯಿರುವ ಕ್ರಿ.ಶ.1423ರ ಶಾಸನ, ಮುಮ್ಮಡಿ ವಿಜಯಬುಕ್ಕರಾಯನ ಕಾಲದಲ್ಲಿ ಬಯನಾಡ ಮಹಾಪ್ರಭುವಾದ ಮಸಣೆಯಳ್ಳಿಯ ಕಂಪಣಗೌಡನು ತನ್ನ ಶ್ರೇಯೋಭಿವೃದ್ಧಿಯಾಗಿ, ಬೆಳಗುಳದ ಗುಂಮಟನಾಥನ ಸೇವಾವಿಧಿಗೆಂದು ತೋಟಹಳ್ಳಿ ಗ್ರಾಮವನ್ನು ಸರ್ವ ಆದಾಯದೊಂದಿಗೆ ನಾಗಣ್ಣ ಒಡೆಯನಿಂದ ಖರೀದಿಸಿ ಗುಮ್ಮಟಪುರ ಎಂಬ ಅಭಿದಾನದೊಂದಿಗೆ ಅದನ್ನು ದತ್ತಿ ಬಿಟ್ಟ ಅಂಶವನ್ನು ತಿಳಿಸುತ್ತದೆ. ಕಾಳಮಂಟೇಶ್ವರ ಗುಡಿ ಗೋಡೆಯಲ್ಲಿರುವ ಕ್ರಿ.ಶ.1416ರ ಶಾಸನ ಬಹಳ ಹಾಳಾಗಿದ್ದರೂ ಅನೇಕ ಗೌಡರುಗಳನ್ನು ಹೆಸರಿದೆ.

ಕಪಿಲ ನದಿಯ ಬಲದಂಡಗೆ ಅನತಿ ದೂರದಲ್ಲಿರುವ ಈ ಊರನ್ನು ನದಿಯ ನೀರು ಮೂರು ಕಡೆಯಿಂದಲೂ ಆವರಿಸಿದ್ದು ಊರಲ್ಲಿ ಸೋಮೇಶ್ವರ ಹಾಗು ಲಕ್ಷೀನರಸಿಂಹನ ಪ್ರಾಚೀನ ದೇವಾಲಯಗಳಿವೆ. ಇಲ್ಲಿರುವ ಅಂನತನಾತ ಬಸದಿಯು ಅರ್ವಾಚಿನ ಕಾಲಾದ್ದಾಗಿದ್ದು ಗರ್ಭಗೃಹದಲ್ಲಿ ಕಂಚಿನ ವಿಗ್ರಹವಿದ್ದು ಜ್ವಾಲಾಮಾಲಿನಿ ಹಾಗೂ ಪದ್ಮಾವತಿ ಮೂರ್ತಿಗಳಿವೆ. ಉಳಿದಂತೆ ಊರಲ್ಲಿ ಬಸವೇಶ್ವರ, ಕಾಲಮಂಟೇಶ್ವರ, ಚಿಕ್ಕದೇವಮ್ಮ ಚೌಡೇಶ್ವರಿ, ಸಂತೇಮಾರಮ್ಮ ಮುಂತಾದ ಗುಡಿಗಳಿದ್ದು, 2 ಬಸದಿಗಳೂ ಇವೆ. ಸರಗೂರಿನಲ್ಲಿ ಲಕ್ಷೀನರಸಿಂಹ ದೇವಾಲಯವು ವಿಜಯನಗರ ಅರಸರ ಆಳ್ವಿಕೆಯ ಅವಧಿಯಲ್ಲಿ ನಿರ್ಮಿಸಲಾಗಿದ್ದು ಇದು ಪಟ್ಟಣದ ಮಧ್ಯಭಾಗದಲ್ಲಿ ಪೂರ್ವಾಭಿಮುಖವಾಗಿದೆ. ಈ ದೇವಾಲಯಕ್ಕೆ ಕ್ರಿ.ಶ.17ನೇ ಶತಮಾನದಲ್ಲಿ ಕಂಠೀರವ ನರಸರಾಜ ಒಡೆಯರವರು ರಚನೆಯಾಗಿದ್ದು ಈ ದೇವಾಲಯಕ್ಕೆ ದತ್ತಿ ನೀಡಿರುವ ಬಗ್ಗೆ ಉಲ್ಲೇಖಿಸಲಾಗಿದೆ. ಈ ದೇವಾಲಯವು ವಿಜಯನಗರ ಕಾಲದ ಶೈಲಿಯಲ್ಲಿದ್ದು ಒಂದು ಗರ್ಭಗೃಹ, ಅಂತರಾಳ, ನವರಂಗ ಮತ್ತು ತೆರೆದ ಮಂಟಪವನ್ನು ಒಳಗೊಂಡಿರುವ ಏಕಕೂಟ ದೇವಾಲಯವಾಗಿದೆ. ಈ ಗುಡಿಯ ಬದಿಯಲ್ಲೇ ಲಕ್ಷೀದೇವಿಯ ಗುಡಿಯೂ ಇದೆ.

**ಶ್ರೀ ಲಕ್ಷೀನರಸಿಂಹ ದೇವಾಲಯ–ಕೆ.ಬೆಳತ್ತೂರು**

ಕೆ.ಬೆಳತ್ತೂರು ಗ್ರಾಮವು ಹೆಗ್ಗಡದೇವನಕೋಟೆಯಿಂದ ದಕ್ಷಿಣಕ್ಕೆ ಸುಮಾರು 15 ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಪಕ್ಕದಲ್ಲಿ ಕಪಿಲಾ ನದಿ ಹರಿಯುತ್ತದೆ. ಈ ಗ್ರಾಮದಲ್ಲಿರುವ ಲಕ್ಷೀನರಸಿಂಹ ದೇವಾಲಯವು

ತುಂಬ ಪ್ರಸಿದ್ಧವಾಗಿರುವಂತಹದ್ದಾಗಿದೆ. ಈ ಗ್ರಾಮದಲ್ಲಿ ಇದುವರೆವಿಗೂ 12 ಶಾಸನಗಳು ದೊರೆತಿವೆ. ಅವುಗಳಲ್ಲಿ ಕ್ರಿ.ಶ.1020 ರಲ್ಲಿ ಬರೆಸಲಾಗಿರುವ ಶಾಸನವು ಬೆಳತ್ತೂರು ಗ್ರಾಮದ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಕ್ರಿ.ಶ. ಸುಮಾರು 19ನೇ ಶತಮಾನದ ಬೆಳತ್ತೂರು ಶಾಸನವು ಲಕ್ಷ್ಮೀನರಸಿಂಹ ದೇವಾಲಯದ ಹಿತ್ತಾಳೆಯ ಸೊಸಲೆಯಿಂದ ಬಂದು ಈ ಹಿತ್ತಾಳೆಯ ಮುಕ್ಕಾಲಿಯನ್ನು ವೆಂಕಮ್ಮನವರು ಮಾಡಿಸಿರುವ ವಿಷಯವನ್ನು ಉಲ್ಲೇಖಿಸಿದೆ. ಬೆಳತ್ತೂರು ಈ ಶಾಸನವು ಲಕ್ಷ್ಮೀನರಸಿಂಹ ದೇವಾಲಯದ ಹಿತ್ತಾಳೆ ತಟ್ಟೆಯ ಮೇಲೆ ತಿಮ್ಮಭೂಮಿ ಮತ್ತು ಚನ್ನ ಭೂಮಿಯವರ ಸೇವೆಯ ವಿಚಾರವನ್ನು ಉಲ್ಲೇಖಿಸಿದೆ. ಕ್ರಿ.ಶ. 19ನೇ ಶತಮಾನದ ಶಾಸನವು ಲಕ್ಷ್ಮೀನರಸಿಂಹ ದೇವಾಲಯದ ಗಂಟೆಯ ಮೇಲೆ ತಮ್ಮಜ್ಜಿರಾಯ ಸೇವೆಯ ವಿಚಾರವನ್ನು ತಿಳಿಸುತ್ತದೆ. ಕ್ರಿ.ಶ. 19ನೇ ಶತಮಾನದ ಬೆಳತ್ತೂರು ಶಾಸನದಲ್ಲಿ ಶ್ರೀ ಲಕ್ಷ್ಮೀನರಸಿಂಹ ದೇವಾಲಯದ ದಿವಾಟಿಗೆಯ ಮೇಲೆ ದೇವರ ಸನ್ನಿಧಿಗೆ ಸೊಸಲೆ ಶೇಷಾದ್ರಿ ಅಯ್ಯಂಗಾರ್‌ರವರು ದೀವಟಿಗೆಗಳನ್ನು ಸೇವಾರ್ಥವನ್ನು ನೀಡಿರುವ ವಿಚಾರವನ್ನು ದಾಖಲಿಸಿದೆ. ಈ ಗ್ರಾಮದಲ್ಲಿ ಲಕ್ಷ್ಮೀನರಸಿಂಹ ಬಾಣೇಶ್ವರ, ಮಲ್ಲೇದೇವರು, ಬಸವಣ್ಣ, ಮಾರಮ್ಮನ ಗುಡಿಗಳು ಕಂಡು ಬರುತ್ತವೆ. ಇವುಗಳಲ್ಲಿ ಲಕ್ಷ್ಮೀನರಸಿಂಹ ದೇವಾಲಯವು ಪ್ರಮುಖವಾದುದಾಗಿದೆ. ಇದೊಂದು ಏಕಕೂಟ ದೇವಾಲಯವಾಗಿದ್ದು ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ಇದರಲ್ಲಿ ಒಂದು ಗರ್ಭಗೃಹ, ಸುಖನಾಸಿ, ನವರಂಗಗಳು ಕಂಡು ಬರುತ್ತವೆ. ಮುಖಮಂಟಪ ನಶಿಸಿ ಹೋಗಿದೆ. ಈ ದೇವಾಲಯವನ್ನು ವಿಜಯನಗರದ ಅರಸರ ಕಾಲದಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ.

**ಕೀರ್ತಿನಾರಾಯಣ ದೇವಾಲಯ– ಕಾಳಿಹುಂಡಿ**

ಕಾಳಿಹುಂಡಿ ಗ್ರಾಮವು ಹೆಗ್ಗಡದೇವನಕೋಟೆಯಿಂದ ಪೂರ್ವಕ್ಕೆ 18 ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಕೀರ್ತಿನಾರಾಯಣಸ್ವಾಮಿ ದೇವಾಲಯ ಮತ್ತು ದುಗ್ಗಲಿ ದೇವಾಸ್ಥಾನ ತುಂಬ ಪ್ರಸಿದ್ಧವಾಗಿದೆ. ದುಗ್ಗಲಿ ದೇವಸ್ಥಾನ ನಶಿಸಿ ಹೋಗಿದೆ. ಈ ಗ್ರಾಮದಲ್ಲಿ ಇದುವರೆವಿಗೂ 4 ಶಾಸನಗಳು ದೊರೆತಿದೆ. ಈ ಶಾಸನಗಳು ಮಲಿಯೂರು ಗ್ರಾಮದ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ. ಅವುಗಳಲ್ಲಿ ಕ್ರಿ.ಶ 1020–22 ಶಾಸನದಲ್ಲಿ ರಾಜೇಂದ್ರ ಚೋಳನು ದುಗ್ಗಲಿ ದೇವಸ್ಥಾನಕ್ಕೆ ಕೈಗಾಣ ಮತ್ತು ಕೊಳಗ ಭೂಮಿಯನ್ನು ಬ್ರಹ್ಮದೇವನಿಗೆ ದಾನವಾಗಿ ನೀಡಿದ ಉಲ್ಲೇಖವಿದೆ. ಈ ಗ್ರಾಮದಲ್ಲಿ ಕೀರ್ತಿನಾರಾಯಣಸ್ವಾಮಿ ದೇವಾಲಯ, ಮಹದೇಶ್ವರ ದೇವಾಲಯಗಳು ಕಂಡು ಬರುತ್ತವೆ. ಇವುಗಳಲ್ಲಿ ಕೀರ್ತಿನಾರಾಯಣಸ್ವಾಮಿ ದೇವಾಲಯವು ಪ್ರಮುಖವಾದುದ್ದಾಗಿದೆ. ಇದೊಂದು ಏಕಕೂಟ ದೇವಾಲಯವಾಗಿದ್ದು ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ಇದರಲ್ಲಿ ಗರ್ಭಗೃಹ, ಸುಖನಾಸಿ, ನವರಂಗಗಳು ಮತ್ತು ಮುಖಮಂಟಪಗಳು ಕಂಡು ಬರುತ್ತವೆ. ಈ ದೇವಾಲಯವನ್ನು ವಿಜಯನಗರದ ಅರಸರ ಕಾಲದಲ್ಲಿ ಜೀಣೋದ್ಧಾರ ಮಾಡಲಾಗಿದೆ. ಆದರೆ ಪ್ರಸ್ತುತ ಈ ದೇವಾಲಯ ಶಿಥಿಲಾವಸ್ಥೆಯಲ್ಲಿದೆ.

**ವೇಣು ಗೋಪಾಲಸ್ವಾಮಿ ದೇವಾಲಯ– ಹುಲಿಕುರ**

ಹುಲಿಕುರ ಎಂಬ ಗ್ರಾಮವು ಹೆಗ್ಗಡದೇವನಕೋಟೆ ತಾಲೂಕಿನಿಂದ ನೈರುತ್ಯಕ್ಕೆ 15 ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ವೇಣು ಗೋಪಾಲಸ್ವಾಮಿ ದೇವಾಲಯವು ಪ್ರಸಿದ್ಧವಾಗಿದೆ. ಈ ಪದ್ರೇಶವು ಹಿಂದೆ

ಕಾಡಿನಿಂದ ಆವೃತವಾಗಿದ್ದು ಇಲ್ಲಿ ಹುಲಿಯ ಹೆಚ್ಚಾಗಿ ವಾಸ ಮಾಡುವುದರಿಂದ ಈ ಪ್ರದೇಶಕ್ಕೆ 'ಹುಲಿಕುರ' ಎಂಬ ಹೆಸರಿನಿಂದ ಕರೆಯಲಾಗಿದೆ ಎಂದು ವೇಣುಗೋಪಾಲಸ್ವಾಮಿ ದೇವಾಲಯದ ಅರ್ಚಕರು ಮಾಹಿತಿಯನ್ನು ನೀಡಿದ್ದಾರೆ. ಹುಲಿಕುರ ಗ್ರಾಮದ ಪೂರ್ವಕ್ಕೆ 500ಮೀ. ದೂರದಲ್ಲಿ ವೇಣು ಗೋಪಾಲಸ್ವಾಮಿ ದೇವಾಲಯವನ್ನು ಪೂರ್ವಾಭಿಮುಖವಾಗಿ ನಿರ್ಮಾಣ ಮಾಡಲಾಗಿದೆ. ಇದೊಂದು ಏಕಕೂಟ ದೇವಾಲಯವಾಗಿದ್ದು, ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ನಂತರ ಕಾಲದಲ್ಲಿ ಅಂದರೆ 1996 ರಲ್ಲಿ ರಾಜಗೋಪುರ ಮತ್ತು ಪ್ರಾಕಾರ ಗೋಡೆಯನ್ನು 1999 ರಲ್ಲಿ ಸ್ಥಾಪನೆ ಮಾಡಲಾಗಿದೆ.

ಹುಲಿಕುರ ಗ್ರಾಮವು ಹೆಗ್ಗಡದೇವನಕೋಟೆ ತಾಲೂಕಿನಿಂದ 10 ಕಿ.ಮೀ. ದೂರದಲ್ಲಿದೆ. ಹುಲಿಕುರ ಗ್ರಾಮವು ಕಪಿಲ ನದಿಯ ಬಲದಂಡೆಯ ಮೇಲಿದೆ ಹಾಗೂ ಗ್ರಾಮದ ಪೂರ್ವದಿಕ್ಕಿನಲ್ಲಿ ಗೋಪಾಲಸ್ವಾಮಿ ದೇವಾಲಯವಿದೆ. ಈ ದೇವಾಲಯಕ್ಕೆ ಸಂಬಂಧಿಸಿದ ಶಾಸನಗಳು ದೊರಕಿಲ್ಲ. ಚೋಳರ ಕಾಲದಲ್ಲಿ ದೇವಾಲಯವನ್ನು ಕಟ್ಟಿಸಿದರು ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ. ಈ ದೇವಾಲಯವು ಗರ್ಭಗುಡಿ, ಸುಖನಾಸಿ, ನವರಂಗ, ಮುಖಮಂಟಪವನ್ನು ಹೊಂದಿದೆ. ದೇವಾಲಯದ ಸಮಿತಿಯಿಂದ ಪ್ರತಿ ವರ್ಷ ಉತ್ಸವ, ನೈವೇದ್ಯ, ಕೊಂಡ ಹಾಯುವುದು, ಪೂಜಾ ವಿಧಿವಿಧಾನಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

**ವರದರಾಜಸ್ವಾಮಿ ದೇವಾಲಯ–ಹಾದನೂರು**

ಹಾದನೂರು ಗ್ರಾಮವು ಹೆಗ್ಗಡದೇವನಕೋಟೆ ತಾಲೂಕು ಕೇಂದ್ರದಿಂದ ದಕ್ಷಿಣಕ್ಕೆ 20 ಕಿ.ಮೀ.ದೂರದಲ್ಲಿದೆ ಈ ಗ್ರಾಮವು ಐತಿಹಾಸಿಕ ಸ್ಥಳವಾಗಿದ್ದು ಈ ಗ್ರಾಮದಲ್ಲಿ ವರದರಾಜಸ್ವಾಮಿ ದೇವಾಲಯ, ಮಲ್ಲಿಕಾರ್ಜುನ ದೇವಾಲಯ ಮತ್ತು ಕುಮಾರ ದೇವರ ಗುಡಿಗಳು ಪ್ರಮುಖವಾಗಿ ಕಂಡು ಬರುತ್ತವೆ. ಈ ಗ್ರಾಮದಲ್ಲಿ ವರದರಾಜಸ್ವಾಮಿ ದೇವಾಲಯವು ಪ್ರಮುಖವಾದುದಾಗಿದೆ. ಈ ದೇವಾಲಯವನ್ನು ಗ್ರಾಮದ ಉತ್ತರಕ್ಕೆ ವರದರಾಜಸ್ವಾಮಿ ದೇವಾಲಯವನ್ನು ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದ್ದು. ಈ ದೇವಾಲಯವು ಇತ್ತೀಚೆಗೆ ಗ್ರಾಮಸ್ಥರಿಂದ ಜೀರ್ಣೋದ್ಧಾರಗೊಂಡಿದೆ.

**ಶ್ರೀರಂಗನಾಥಸ್ವಾಮಿ ದೇವಾಲಯ– ಭೀಮನಕೊಲ್ಲಿ**

ಈ ದೇವಾಲಯವು ಮೂರ್ಬಂದ್ ಗ್ರಾಮದಿಂದ ಭೀಮನಕೊಲ್ಲಿಗೆ ಹೋಗುವ ರಸ್ತೆ ಮಾರ್ಗದ ಅರಣ್ಯ ಇಲಾಖೆಗೆ ಸೇರಿರುವ ಜಾಗದ ಎಡಭಾಗದಲ್ಲಿ ಕಂಡು ಬರುತ್ತದೆ. ಈ ದೇವಾಲಯವನ್ನು ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದ್ದು ಗರ್ಭಗೃಹ, ಸುಖನಾಸಿ. ನವರಂಗ ಮತ್ತು ಮುಖಮಂಟಪವನ್ನು ಒಳಗೊಂಡಿರುವ ಏಕಕೂಟ ದೇವಾಲಯವಾಗಿದೆ. ಈ ಗರ್ಭಗೃಹದಲ್ಲಿನ ಮೂರ್ತಿಶಿಲ್ಪವನ್ನು ಬೇರೆಡೆಗೆ ಸ್ಥಳಾಂತರಿಸಲಾಗಿದೆ. ಈ ದೇವಾಲಯವು ಪ್ರಸ್ತುತವಾಗಿ ಶಿಥಿಲಾವಸ್ಥೆಯಲ್ಲಿದ್ದು ಇದರ ನಿರ್ಮಾಣದ ಬಗ್ಗೆ ತಿಳಿಯಲು ಯಾವುದೇ ಸಾಕ್ಷ್ಯಾಧಾರಗಳು ನಮಗೆ ದೊರೆಯುವುದಿಲ್ಲ. ಆದರೆ ಅದರ ವಾಸ್ತುರಚನೆ ಶೈಲಿಯಿಂದ ಇದನ್ನು ವಿಜಯನಗರ ಅರಸರ ಕಾಲದಲ್ಲಿ ನಿರ್ಮಿಸಲಾಗಿದೆಯೆಂದು ಹೇಳಬಹುದು.

**ಪದ್ಮಾವತಮ್ಮ ದೇವಾಲಯ–ಭೀಮನಕೊಲ್ಲಿ**

ಈ ದೇವಾಲಯವು ಗ್ರಾಮದ ಹೊರಭಾಗದಲ್ಲಿ ಉತ್ತರಾಭಿಮುಖವಾಗಿ ನಿರ್ಮಿಸಲಾಗಿದೆ. ಈ ದೇವಾಲಯದ ಕಾಲಮಾನದ ಬಗ್ಗೆ ತಿಳಿಯಲು ಯಾವುದೇ ಶಾಸನಾಧಾರಗಳು ಮತ್ತು ಇತರ ಲಿಖಿತ ಆಧಾರಗಳು ಇದುವರೆವಿಗೂ ದೊರೆತಿರುವುದಿಲ್ಲ. ಆದರೆ ಈ ದೇವಾಲಯದ ವಾಸ್ತುರಚನೆ ಆಧಾರದ ಮೇಲೆ ವಿಜಯನಗರ ಕಾಲದಲ್ಲಿ ನಿರ್ಮಾಣವಾಗಿದೆ ಎಂದು ಹೇಳಬಹುದಾಗಿದೆ. ಈ ದೇವಾಲಯದಲ್ಲಿ ಮೂರು ಗರ್ಭಗೃಹಗಳು ಕಂಡು ಬಂದಿದ್ದು. 8 ಅಡಿ ಉದ್ದ ಮತ್ತು 8 ಅಡಿ ಅಗಲವನ್ನು ಹೊಂದಿದೆ. ಆದರೆ ಈ ಗರ್ಭಗೃಹಕ್ಕೆ ಯಾವುದೇ ಮೂರ್ತಿಶಿಲ್ಪಗಳು ಪ್ರಸ್ತುತ ಕಂಡುಬರುವುದಿಲ್ಲ. ಮೂಲತಃವಾಗಿ ಈ ಗರ್ಭಗೃಹದಲ್ಲಿ ಪ್ರತಿಷ್ಠಾಪನೆ ಮಾಡಲಾಗಿದ್ದ ಮೂರ್ತಿ ಶಿಲ್ಪಗಳನ್ನು ಇದೇ ತಾಲೂಕಿನಲ್ಲಿ 12 ಕಿ.ಮೀ ದೂರದಲ್ಲಿರುವ ಹೊಸೂರು ಕಳಸೂರು ಎಂಬಲ್ಲಿ ಕೊಂಡೊಯ್ದು ಅಲ್ಲಿ ಇವುಗಳಿಗೆ ಪ್ರತ್ಯೇಕವಾದ ದೇವಾಲಯ ನಿರ್ಮಾಣ ಮಾಡಿ ಪೂಜಿಸುತ್ತಿದ್ದಾರೆ. ಬಾಗಿಲುವಾಡಿ ಸರಳ ಅಲಂಕರಣೆಯಿಂದ ಕೂಡಿದ್ದು ದ್ವಾರದ ಇಕ್ಕೆಲಗಳಲ್ಲಿ ಕುಬ್ಜ ಶಿಲ್ಪಗಳ ಕೆತ್ತನೆ ಮಾಡಲಾಗಿದೆ. ಲಲಾಟಬಿಂಬದಲ್ಲಿ ಅರಳಿದ ಪದ್ಮಪುಷ್ಪವನ್ನು ಕೆತ್ತನೆ ಮಾಡಲಾಗಿದೆ.

**ಲಕ್ಷ್ಮೀಕಾಂತ ದೇವಾಲಯ–ಕೊತ್ತೆಗಾಲ**

ಕೊತ್ತೆಗಾಲ ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲೂಕಿಗೆ ಸೇರಿದ್ದು ಮೈಸೂರಿನಿಂದ 28 ಕಿ.ಮೀ ಪಶ್ಚಿಮಕ್ಕೆ ಗದ್ದಿಗೆಗೆ ಹೋಗುವ ರಸ್ತೆಯಲ್ಲಿದೆ. ಗ್ರಾಮದಲ್ಲಿ ಬಸವೇಶ್ವರ ದೇವಾಲಯ, ಮಾರಮ್ಮ ದೇವಾಲಯ. ಲಕ್ಷ್ಮೀಕಾಂತ ದೇವಾಲಯ, ಆಂಜನೇಯ ದೇವಾಲಯ, ಉಪ್ಪರಿಕೆ ದೇವಾಲಯಗಳಿವೆ, ಜೊತೆಗೆ ಶಿಲಾಯುಗದ ಮಾನವನ ಅವಶೇಷಗಳು ಸಹ ಗ್ರಾಮದ ನೆಲೆಯಲ್ಲಿ ದೊರಕಿವೆ. ಕೊತ್ತೆಗಾಲ ಗ್ರಾಮದಲ್ಲಿ ಲಕ್ಷ್ಮೀಕಾಂತ ದೇವಾಲಯವು ಪ್ರಮುಖವಾಗಿದೆ. ಗ್ರಾಮದ ಪೂರ್ವಕ್ಕೆ ಈ ದೇವಾಲಯವು ಉತ್ತರಾಭಿಮುಖವಾಗಿದ್ದು ಗರ್ಭಗುಡಿ, ನವರಂಗ, ಮಂಟಪಗಳು ದ್ವಾರಬಾಗಿಲುಗಳಿಂದ ದೇವಾಲಯವು ನಿರ್ಮಾಣಗೊಂಡಿದೆ, ಈ ದೇವಾಲಯವು ಅವನತಿಯಲ್ಲಿದ್ದು ಗಿಡಗಂಟೆಗಳಿಂದ ಮುಚ್ಚಿಹೋಗಿದೆ. ಗರ್ಭಗುಡಿಯಲ್ಲಿ ಮೂರ್ತಿ ಶಿಲ್ಪವಿಲ್ಲದೆ ಅನಾಥವಾಗಿದೆ. ನವರಂಗದಲ್ಲಿ 12 ಕಂಬಗಳಿವೆ. ಗರ್ಭಗುಡಿಯಲ್ಲಿ 2 ಅಡಿ ಎತ್ತರ, 2 ಅಡಿ ಅಗಲದ ಧ್ಯಾನಮಗ್ನನಾಗಿ ಕುಳಿತಿರುವ ರಾಮಾನುಜಾಚಾರ್ಯರ ಸರಳವಾದ ಮೂರ್ತಿ ಶಿಲ್ಪವಿದೆ. ಈ ಗರ್ಭಗುಡಿಯಲ್ಲಿ ಒಳಗೆ ಜೋಡಿ ಮೀನಿನ ಶಿಲ್ಪ ವರಾಂಡದ ಕಂಬಗಳ ಮೇಲೆ ಆಂಜನೇಯ ಶಿಲ್ಪ ಕಮಲದ ಹೂವಿನ ಶಿಲ್ಪ ಜೋಡಿ ಗಿಣಿಗಳ ಶಿಲ್ಪ ಅಲಂಕಾರಿಕ ಆನೆಯ ಶಿಲ್ಪ, ಮುಂತಾದ ಶಿಲ್ಪಗಳು ಈ ದೇವಾಲಯದ ಕಂಬಗಳ ಮೇಲೆ ಕೆತ್ತಲಾಗಿದೆ. ದೇವಾಲಯವನ್ನು ಗ್ರಾನೈಟ್ ಕಲ್ಲು, ಇಟ್ಟಿಗೆ, ಗಾರೆ, ಬಳಸಿ ನಿರ್ಮಿಸಿದ್ದು ದೇವಾಲಯ ಗಿಡ, ಮರ ಬಳ್ಳಿಗಳಿಂದ ಆವೃತವಾಗಿ ಅವನತಿ ಅಂಚಿನಲ್ಲಿದೆ. ಹೀಗೆ ಹೆಗ್ಗಡದೇವನಕೋಟೆ ತಾಲೂಕಿನ ಶಾಸನೋಕ್ತ ವೈಷ್ಣವ ದೇವಾಲಯಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

**ಪರಾಮರ್ಶನ ಗ್ರಂಥಗಳು**


- ಚಿದಾನಂದಮೂರ್ತಿ, ಎಂ. *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.*

- ಗಿರಿಗೌಡ, ನೀ. (2011). *ಹೆಗ್ಗಡದೇವನಕೋಟೆ ತಾಲೂಕು ಗ್ಯಾಸೆಟಿಯರ್.* ಪರಿಶ್ರೀ ಮುದ್ರಾಣಾಲಯ.
- ನಾಯಕ, ಹಾ.ಮಾ. (1974). *ಎಪಿಗ್ರಾಫಿಯ ಕರ್ನಾಟಿಕ, ಸಂ–03.* ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
- ರಾಮಚಂದ್ರರಾವ್, ಎಸ್. ಕೆ. *ಗುಡಿ ಜನರ ಜೀವನಾಡಿ.*
- ರಾಮಯ್ಯಂಗಾರ್, ಎಸ್.ಕೆ. (1999). *ಕೆಲವು ಧಾರ್ಮಿಕ ಕರ್ತವ್ಯಗಳು.*
- ಶೆಟ್ಟರ್, ಷ. (2007). *ಸಂಗಂ ತಮಿಳಗಂ* ಮತ್ತು *ಕನ್ನಡ ನಾಡು ನುಡಿ.* (ಆರಂಭ ಕಾಲದ ದ್ರಾವಿಡ ಸಂಬಂಧದ ಚಿಂತನೆ) ಅಭಿನವ ಪ್ರಕಾಶನ,